**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.954/2023**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಡಾ.ಸುಂದರೇಶ್ | ಫ್ರಾ.ಸಾ-8 |
| ತಂದೆಯ ಹೆಸರು | ಃ ನಿರ್ವಾಣೇಗೌಡ | ಚಾಸಾ-13 |
| ವಯಸ್ಸು | ಃ 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | ಃ ತಾಲ್ಲೂಕು ಆರೋಗ್ಯ ಅಧಿಕಾರಿ | ದಿನಾಂಕಃ24.04.2024. |
| ವಾಸಸ್ಥಳ | ಃ ಮೂಡಿಗೆರೆ | |

**ಃಮುಖ್ಯ ವಿಚಾರಣೆಃ ಪ್ರಾಜ್ಞ್ಯಾ.ಸ.ಸ.ಅ. ರವರಿಂದಃ**

ನಾನು 2016 ನೇ ಇಸವಿಯಿಂದ ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಲ್ಲಿ ತಾಲ್ಲೂಕು ಆರೋಗ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.27.05.2023 ರಂದು ಗುತ್ತಿಗೆ ಆಧಾರದ ಮೇಲೆ ಕಳಸ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಯಾಗಿದ್ದ ಡಾ.ವಿಜಯ್ ರವರು ಮೃತ ಅಂಥೋನಿ ಮಥಾಯಿಸ್ ರವರ ಮೃತ ದೇಹವನ್ನು ಮರಣೋತ್ತರ ಶವ ಪರೀಕ್ಷೆ ಮಾಡಿ ಆ ಬಗ್ಗೆ ಪೋಸ್ಟ್ ಮಾರ್ಟಮ್ ಪುಸ್ತಕದಲ್ಲಿ ನಮೂದು ಮಾಡಿದ್ದರು. ಸದರಿ ಮೃತರ ಪಿ.ಎಂ. ವರದಿ ನೀಡುವಂತೆ ಕಳಸ ಪೋಲಿಸರು ಕೇಳಿದ್ದರಿಂದ ನಾನು ಕಳಸ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಇರುವ ಪೋಸ್ಟ್ ಮಾರ್ಟಮ್ ಪುಸ್ತಕದಲ್ಲಿ ಲಭ್ಯವಿದ್ದ ಮಾಹಿತಿ ಮೇರೆಗೆ ಪಿ.ಎಂ. ವರದಿಯನ್ನು ನೀಡಿರುತ್ತೇನೆ.

ಪೋಸ್ಟ್ ಮಾರ್ಟಮ್ ಪುಸ್ತಕದಲ್ಲಿ ಕಾಜ್ ಆಫ್ ಡೆತ್ ಬರೆದಿರಲಿಲ್ಲ ಆದರೆ ಉಳಿದ ಮಾಹಿತಿಗಳನ್ನು ಬರೆಯಲಾಗಿತ್ತು. ಸದರಿ ಪುಸ್ತಕದಲ್ಲಿ ಲಭ್ಯವಿದ್ದ ಮಾಹಿತಿಯ ಪ್ರಕಾರ ಮೃತರ ತಲೆಯ ಎಡಭಾಗದಲ್ಲಿ ಊತದ ಗಾಯ ಇದ್ದು ಅದು ಮೃತರ ಹೃದಯ ಸ್ತಬ್ದಕ್ಕೆ ಕಾರಣವಾಗಿ ಮರಣ ಹೊಂದಿರುತ್ತಾರೆ ಎಂದು ಅಭಿಪ್ರಾಯ ಪಟ್ಟು ನಾನು ಈಗ ನೋಡುತ್ತಿರುವ ಪಿ.ಎಂ. ವರದಿಯನ್ನು ಪೋಲಿಸರಿಗೆ ನೀಡಿದ್ದು ಸದರಿ ಪಿ.ಎಂ. ವರದಿಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಪಿ.ಎಂ. ವರದಿಯನ್ನು ನಿಪಿ-25, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎ.ಎಂ. ವಕೀಲರಿಂದಃ**

ದಿ.27.05.2023 ರಂದು ಕಳಸ ಸಮುದಾಯ ಆರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿಯಾಗಿ ಡಾ.ವಿಜಯ್ ರವರು ಮಾತ್ರ ಇದ್ದರು. ಸದರಿ ದಿನ ಡಾ.ವಿಜಯ್ ರವರು ಕರ್ತವ್ಯಕ್ಕೆ ರಜೆ ಹಾಕಿರಲಿಲ್ಲ. ನಾನು ಮೃತ ದೇಹವನ್ನು ಸ್ವತಃ ಪರೀಕ್ಷಿಸದೇ ಪೋಸ್ಟ್ ಮಾರ್ಟಮ್ ಪುಸ್ತಕದ ಆಧಾರದ ಮೇಲೆ ಪಿ.ಎಂ. ವರದಿ ನೀಡಿರುತ್ತೇನೆ ಎಂದರೆ ಸರಿ. ಮೃತ ದೇಹವನ್ನು ಸ್ವತಃ ನೋಡಿ ಪರೀಕ್ಷಿಸದೇ ಇದ್ದರೆ ಮೃತ ದೇಹದಲ್ಲಿ ಗಾಯಗಳ ಬಗ್ಗೆ ಸ್ಪಷ್ಟವಾಗಿ ಹೇಳಲಾಗುವುದಿಲ್ಲ

ಎಂದರೆ ಸರಿ. ಪಿ.ಎಂ. ವರದಿಯನ್ನು ಸ.4.00 ಗಂಟೆ ಸಮಯಕ್ಕೆ ಪೋಲಿಸರಿಗೆ ಕೊಟ್ಟಿದ್ದೇನೆ. ಕಾರಿನ ಎಡಬದಿಯಲ್ಲಿ ಕುಳಿತಿರುವ ವ್ಯಕ್ತಿಯನ್ನು ತಕ್ಕಣವಾಗಿ ಕಾರಿನಿಂದ ಹೊರಗೆ ಎಳೆಯುವಾಗ ಸದರಿ ವ್ಯಕ್ತಿಯ ತಲೆ ಕಾರಿನ ಮೇಲ್ಭಾಗದ ಚಾಸಿಗೆ ತಗುಲಿ ನಾನು ಪಿ.ಎಂ. ವರದಿ ನಮೂದಿಸಿರುವ ಗಾಯ ಉಂಟಾಗಬಹುದು ಎಂದರೆ ಸರಿ. ಆ ರೀತಿ ತಕ್ಷಣವಾಗಿ ಕಾರಿನಿಂದ ಎಳೆಯುವಾಗ ಹೃದಯಘಾತವಾಗಬಹುದು ಎಂದರೆ ಇರಬಹುದು. ಅದೇರೀತಿ ಕಾರಿನ ಬಲಭಾಗದಲ್ಲಿ ಕುಳಿತಿರುವ ವ್ಯಕ್ತಿಯನ್ನು ತಕ್ಷಣವಾಗಿ ಕಾರಿನಿಂದ ಎಳೆದರೆ ಮೇಲೆ ಹೇಳಿದ ರೀತಿ ಗಾಯವಾಗುತ್ತದೆ ಎಂದರೆ ಸರಿ.

ಮೃತ ದೇಹದ ಮೇಲೆ ಇತ್ತು ಎಂದು ಹೇಳಲಾದ ಗಾಯ ಎಷ್ಟು ವಿಸ್ತೀರ್ಣದಲ್ಲಿ ಇತ್ತು ಎಂದು ಈಗ ನಿಖರವಾಗಿ ಹೇಳಲು ಆಗುವುದಿಲ್ಲ. ಡಾ.ವಿಜಯ್ ರವರು ಬರೆದಿದ್ದ ವರದಿಯನ್ನು ನೋಡಿ ಪಿ.ಎಂ. ವರದಿ ಕೊಟ್ಟಿದ್ದರೆ ಪಿ.ಎಂ. ವರದಿಯಲ್ಲಿ ಎಲ್ಲಾ ಮಾಹಿತಿಗಳನ್ನು ನಿರ್ದಿಷ್ಟವಾಗಿ ಬರೆಯುತ್ತಿದ್ದೆ ಎಂದರೆ ಸರಿ. ನಿಪಿ-25 ನ್ನು ತಯಾರು ಮಾಡುವಾಗ ನನ್ನ ಕಚೇರಿಯ ಸಹಾಯಕರು ನನ್ನೊಂದಿಗೆ ಇದ್ದರು. ಮರಣೋತ್ತರ ಪರೀಕ್ಷೆ ನಡೆಸುವ ಸಂದರ್ಭದಲ್ಲಿ ಮೃತ ದೇಹದ ಮೇಲೆ ಯಾವ ಬಣ್ಣದ ಬಟ್ಟೆ ಇದ್ದವು ಎಂದು ನನ್ನಿಂದ ಹೇಳಲು ಆಗುವುದಿಲ್ಲ. ಶುಗರ್, ಬಿ.ಪಿ., ರಕ್ತದೊತ್ತಡ ಮತ್ತು ಹೈ ಕೊಲೆಸ್ಟ್ರಾಲ್ ನಿಂದ ಬಳಲುತ್ತಿರುವ ವ್ಯಕ್ತಿಯು ಸಾಧಾರಣವಾಗಿ ಬಿಸಿಲು ಹೆಚ್ಚಿರುವ ಸಮಯದಲ್ಲಿ ಯಾವುದಾದರೂ ಕಲ್ಲಿನ ಮೇಲೆ ಬಿದ್ದರೆ ಅವರಿಗೆ ಹೃದಯಾಘಾತವಾಗುತ್ತದೆ ಎಂದರೆ ಇರಬಹುದು.

ಮೃತ ದೇಹದ ಮೇಲೆ ಆಂಜನೇಯ ಮತ್ತು ಓಂ ಎಂದು ಗುರುತು ಇದ್ದ ಬಗ್ಗೆ ಡಾ.ವಿಜಯ್ ರವರ ವರದಿಯಲ್ಲಿ ಇರಲಿಲ್ಲ. ಚಾಸಾ-1 ರವರಿಂದ ಹಣ ಪಡೆದು ಅವರಿಗೆ ಮೃತರ ಅಪಘಾತದಿಂದ ವಿಮಾ ಪರಿಹಾರ ಬರುವಂತೆ ಸಹಾಯ ಮಾಡುವ ಉದ್ದೇಶದಿಂದ ನಿಪಿ-25 ರ ಸುಳ್ಳು ದಾಖಲೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ವಿಷಯವನ್ನು ಪರಿಶೀಲಿಸದೇ ಸುಮ್ಮನೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತರ ಹಾಗೂ ಪ್ರಕರಣದ ಬಗ್ಗೆ ನನಗೆ ಮೂಲ ಮಾಹಿತಿ ಇಲ್ಲ ಎಂದರೆ ಸರಿ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.